# *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

**ಎಸ್.ಸಿ. 45/2021**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಶ್ರೀ ಸಾದಿಕ್ ರೆಹಮಾನ್ | | *ಪ್ರಮಾಣ ಮಾಡಿಸಿದ ದಿನಾಂಕಃ* |
| ತಂದೆ/ಗಂಡನ ಹೆಸರು | ಃ ಶ್ರೀ ಅಬ್ದುಲ್ ರಶೀದ್ | | **06.10.2023** |
| ವಯಸ್ಸು | ಃ 44 ವರ್ಷ | | |
| ವೃತ್ತಿ | ಃ ಅಂಗಡಿ ವ್ಯಾಪಾರ | | ಪ್ರಾ.ಸಾ. ಃ 09 |
| ವಾಸಸ್ಥಳ | ಃ ಕ್ಯಾತಮಾರನಹಳ್ಳಿ, ಮೈಸೂರು | | ಚಾ.ಸಾ. ಃ 12 |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ನಾನು ಮೈಸೂರಿನ ದೇವರಾಜ ಮಾರುಕಟ್ಟೆಯಲ್ಲಿ ಮನೆಯ ಅಡುಗೆ ಸಾಮಾನುಗಳ ಅಂಗಡಿಯನ್ನು ನಡೆಸುತ್ತೇನೆ. ಕೋರ್ಟ್ ಮುಂದೆ ಇರುವ ಆರೋಪಿತರ ಪೈಕಿ ಯಾರು ಸಹ ನಮ್ಮ ಅಂಗಡಿಗೆ ಬಂದು ಯಾವುದೇ ವಸ್ತುವನ್ನು ಖರೀದಿ ಮಾಡಿಲ್ಲ. ಈಗ ನನಗೆ ತೋರಿಸುತ್ತಿರುವ *2* ಮರದ ಹಿಡಿಕೆ ಇರುವ ಚಾಕುಗಳು ನಮ್ಮ ಅಂಗಡಿಯಿಂದ ಮಾರಿದ್ದ ಚಾಕುಗಳು ಅಲ್ಲ. ಈಗ ಅಂದಾಜು *4* ವರ್ಷಗಳ ಹಿಂದೆ ಒಂದು ದಿನ ಪೋ.ಇನ್ಸ್‌ಪೆಕ್ಟರ್ ಮತ್ತು ಅವರ ಸಿಬ್ಬಂದಿಗಳು ನಮ್ಮ ಅಂಗಡಿಗೆ ಬಂದು ನನ್ನ ಅಂಗಡಿಯಿಂದ ಯಾರೋ ಇಬ್ಬರು ವ್ಯಕ್ತಿಗಳು ಚಾಕು ಖರೀದಿ ಮಾಡಿದ್ದಾರೆ ಎಂದು ಬರೆದುಕೊಂಡು ನನ್ನ ಸಹಿ ಪಡೆದುಕೊಂಡು ಹೋಗಿದ್ದರು. ಆ ಕಾಲಕ್ಕೆ ಪೋಲೀಸರು ಬೇರೆ ಯಾವುದೇ ವ್ಯಕ್ತಿಗಳನ್ನು ನನ್ನ ಅಂಗಡಿ ಬಳಿ ಕರೆದುಕೊಂಡು ಬಂದಿಲ್ಲ. ಪೋಲೀಸರು ಈ ಪ್ರಕರಣದ ಆರೋಪಿತರನ್ನು ನಮ್ಮ ಅಂಗಡಿ ಬಳಿ ಕರೆದುಕೊಂಡು ಬಂದು ನನಗೆ ತೋರಿಸಿ ನನ್ನ ಹೇಳಿಕೆಯನ್ನು ಪಡೆದಿಲ್ಲ. ಕೋರ್ಟ್ ಮುಂದೆ ಇರುವ *1* ಮತ್ತು *2* ನೇ ಆರೋಪಿತರನ್ನು ಈ ಮೊದಲು ನಾನು ಎಲ್ಲಿಯೂ ನೋಡಿಲ್ಲ.

***ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.***

***ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-***

2. ದಿಃ25.10.2020 ರಂದು ಸರಸ್ವತಿಪುರಂ ಪೋ.ಠಾಣೆಯ ತನಿಖಾಧಿಕಾರಿಯಾದ ವಿಜಯ್ ಕುಮಾರ್.ಆರ್ ಮತ್ತು ಅವರ ಸಿಬ್ಬಂದಿಗಳು ಕೋರ್ಟ್ ಮುಂದೆ ಇರುವ 1 ಮತ್ತು 2 ನೇ ಆರೋಪಿತರನ್ನು ನಮ್ಮ ಅಂಗಡಿ ಬಳಿ ಕರೆದುಕೊಂಡು ಬಂದು ಅವರು ನಮ್ಮ ಅಂಗಡಿಯಿಂದ ಎರಡು ಚಾಕು ಖರೀದಿಸಿ ಆ ಚಾಕುಗಳಿಂದ ಪರಶಿವಮೂರ್ತಿ ಎನ್ನುವವರನ್ನು ಕೊಲೆ ಮಾಡಿದ್ದಾಗಿ ತಿಳಿಸಿದಾಗ ನಾನು ಆ ಇಬ್ಬರು ವ್ಯಕ್ತಿಗಳನ್ನು ಗುರುತಿಸಿ ಆ ಬಗ್ಗೆ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಈ ಕುರಿತು ಈ ದಿನ ---------- ನೀಡಿರುವುದಿಲ್ಲ ಎಂದು ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ-59 ಎಂದು ಗುರುತಿಸಿದೆ. ಆ ದಿನ ನಮ್ಮ ಅಂಗಡಿಗೆ ಕರೆದುಕೊಂಡು ಬಂದಾಗ ಮತ್ತು 2 ನೇ ಆರೋಪಿತರು ಈಗ ನನಗೆ ತೋರಿಸಿದ ಬಟ್ಟೆಗಳನ್ನು ಧರಿಸಿದ್ದರು ಎಂದರೆ ಸರಿಯಲ್ಲ. ಈ ಆರೋಪಿತರೊಂದಿಗೆ ಶಾಮೀಲಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು : ಆರೋಪಿ ಪರ ವಕೀಲರವರಿಂದಃ- ಇಲ್ಲ

ಮರು ವಿಚಾರಣೆಃ- ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು